# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

**ಎಮ್ ವಿ ಸಿ ನಂಃ 427/2022**
**ಪಿ.ಡಬ್ಲ್ಯೂಃ 1, ನಾಜೇಯಾ ತಬಸುಮ**

ದಿನಾಂಕ :27-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ :- ಶ್ರೀ V S R ವಕೀಲರಿಂದ

ಸಾಕ್ಷಿಯು ಈ ದಿನ ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

ನಿಪಿ-8- ಡೆತ ಸಮರಿ

ಅರ್ಜಿದಾರರ 1 ರಿಂದ 4 ಇವರ ಆಧಾರ ಕಾರ್ಡನ ಜರಾಕ್ಸ ಪ್ರತಿ ಹಾಜರುಪಡಿಸಿರುತ್ತಾರೆ.

ಪಾಟಿ ಸವಾಲುಃ ಶ್ರೀ B S K ವಕೀಲರಿಂದಃ

ಮೃತ ಅಲ್ತಾಫ ಹುಸೇನ ನನ್ನ ತಂದೆ ಆಗಿದ್ದರು. 1 ನೇ ಅರ್ಜಿದಾರ ನನ್ನ ತಾಯಿ. 2 ಮತ್ತು 3 ನೇ ಅರ್ಜಿದಾರರು ನನ್ನ ಸಹೋದರರು ಅವರು ಕೂಲಿ ಕೆಲಸ ಮಾಡುತ್ತಾರೆ ಎಂದು ಬರೆದಿರುವುದು ಸರಿ ಇರುತ್ತದೆ. ನನ್ನ ತಂದೆ ಹೋಟೇಲ ವ್ಯಾಪಾರ ಮಾಡುತ್ತಿದ್ದರು ಅದು ನೊಂದಣಿ ಮಾಡಿಸಿ ಲೈಸನ್ಸ ಪಡದಿದ್ದರೋ ಹೇಗೋ ನನಗೆ ಗೊತ್ತಿಲ್ಲ. ನನ್ನ ತಂದೆ ಹೊಟೇಲ ವ್ಯಾಪಾರ ಮಾಡಿ ತಿಂಗಳಿಗೆ ರೂ 20000/- ದುಡಿಯುತಿದ್ದರು ಎಂದು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ. ನಾನು ಎಲ್ಲರೂ ಅವರ ಆದಾಯದ ಮೇಲೆ ಅವಲಂಬಿತರಾಗಿದ್ದೇವು ಎಂದು ಸುಳ್ಳು ಹೇಳಿದ್ದೆನೆ ಅಂದರೆ ಸರಿಯಲ್ಲ. 3 ನೇ ಅರ್ಜಿದಾರರು ದೂರು ಕೊಟ್ಟಿರುತ್ತಾರೆ ಅಪಘಾತದ ದಿನ ನನ್ನ ತಂದೆ ಗಾಡಿ ಓಡಿಸುತಿದ್ದು 3 ನೇ ಅರ್ಜಿದಾರ ಹಿಂದೆ ಕುಳಿತಿದ್ದರು ಅಂದರೆ ಸರಿ. ಅಪಘಾತ ಆದ ನಂತರ ನನ್ನ ತಂದೆಯನ್ನು ಸೇಡಂ ಸರಕಾರಿ ಆಸ್ಪತೆಗೆ ಕರೆ ದುಕೂಂಡು ಹೋಗಿ ನಂತರ ಕಲಬುರಗಿಯ ಕಾಮರೆಡ್ಡಿ ಆಸ್ಪತ್ರೆಗೆ ಅದೇ ದಿನ ದಾಖಲು ಮಾಡಿರುತ್ತಾರೆ . ಅಲ್ಲಿ ಸುಮಾರು 20 ರಿಂದ 25 ದಿನ ಚಿಕಿತ್ಸೆ ಪಡೇದಿರುತ್ತಾರೆ. ಅಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಮತ್ತು ಬಿಡುಗಡೆ ಹೊಂದಿದದ ಬಗ್ಗೆ , ಔಷಧಿ ಬಿಲ್ಲುಗಳು ದಾಖಲೆಗಳನ್ನು ಹಾಜರು ಪಡಿಸಿಲ್ಲ. 13-3-2020 ರಂದು ಅಪಘಾತ ಆಗಿದ್ದು ನನ್ನ ತಂದೆ 1-6-2020 ರಂದು ಮೃತ ಪಟ್ಟಿದ್ದಾರೆ ಅಂದರೆ ಸರಿ. ಗುಲಬರ್ಗದ ಸರಕಾರಿ ಆಸ್ಪತೆಯಲ್ಲಿ 31-5-2020 ರಂದು ದಾಖಲು ಆಗಿ 1-6-2020 ರಂದು ಮೃತ ಪಟ್ಟಿದ್ದಾರೆ ಅಂದರೆ ಸರಿ. ಕಾಮರೆಡ್ಡಿ ಆಸತೆಜುಂದ ಬಿಡುಗಡೆ ಆದ ನಂತರ ಸರಕಾರಿ ಆಸ್ಪತ್ರೆ ಗುಲಬರ್ಗದಲ್ಲ 31-5-2020 ರಂದು ದಾಖಲು ಆಗುವ ವರೆಗೂ ನಮ್ಮ ತಂದೆ ಮನೆಯಲ್ಲಿ ಚಿಕಿತೇ ಪಡ ಯತ್ತಿದ್ದರು ಆ ಬಗ್ಗೆ ದಾಖಲೆ ಹಾಕಿಲ್ಲ. ನಾನು ಸದರಿ ಸಮಯದಲ್ಲಿ ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ಕೆನೆಂದರೆ ಸರಿಯಲ್ಲ. ನಾನು ಕಾಮ ರೆಡ್ಡಿ ಆಸ್ಪತ್ರೆಯಲ್ಲಿ ನನ್ನ ತಂದೆ ಚಿಕಿತ್ಸೆ ಪಡೆದ ಬಗ್ಗೆ ದಾಖಲೆ ಹಾಕಿಲ್ಲ ಅಂದರೆ ಸರಿಯಲ್ಲ.

# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

ಎಮ್ ವಿ ಸಿ ನಂಃ **427/2022**
**ಪಿ.**ಡಬ್ಲ್ಯೂಃ **1,** ನಾಜೀಯಾ ತಬಸುಮ

ನನ್ನ ತಂದೆಗೆ ತೆಲೆಗೆ ಆದ ಗಾಯ ಸಂಪೂರ್ಣ ವಾಸಿ ಆಗಿದ್ದು ಆ ನಂತರ ಅವರು ಬಿಡುಗಡೆ ನೀಡಿದ್ದರು ಅಂದರೆ ಸರಿಯಲ್ಲ. ನನ್ನ ತಂದೆಗೆ ತಲೆಗೆ ಆದ ಪೆಟ್ಟಿನಿಂದ ನಂತರ ಮೃತ ಪಟ್ಟರು ಎಂದು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ. ಅವರು ಬೇರೆ ಕಾರಣಕ್ಕೆ ಮೃತ ಪಟ್ಟಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ನಾನು ಈ ದಿನ ಹಾಜರು ಪಡಿಸಿದ ಡೆತ ಸಮರಿ ದಾಖಲೆಯನ್ನು ಸೃಷ್ಟಿಸಿ ಹಾಕಿದ್ದೇನೆ ಅಂದರೆ ಸರಿಯಲ್ಲ. ನನ್ನ ತಂದೆ ಅಪಘಾತದಲ್ಲಿ ಆದ ಗಾಯಗಳಿಂದ ಮೃತಪಟ್ಟಿಲ್ಲಾ ಆದ್ದರಿಂದ ಎದುರುದಾರರು ಪರಿಹಾರ ನೀಡಲು ಭಾಧ್ಯಸ್ಥರು ಅಲ್ಲಾ ಅಂದರೆ ಸರಿಯಲ್ಲ. ಎದುರುದಾರರ ವಾಹನ ಚಾಲಕನ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಗೆ ಪೋಸ್ಟ ಮಾಟಂ ಮಾಡಿರುವುದಿಲ್ಲ ಅದು ಕೋವಿಡ ಅವಧಿ ಆಗಿತ್ತು ಎಂದು ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲಾ

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ**.**